ಓಂ ಶಾಂತಿ, ಬಾಪ್‍ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 02-01-1990.

# ಇಡೀ ಜ್ಞಾನದ ಸಾರ- ಸ್ಮೃತಿ

(सारे ज्ञान का सार - स्मृति)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಅವ್ಯಕ್ತ ಬಾಪ್‍ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.

ಇಂದು ಸಮರ್ಥ ತಂದೆ ತನ್ನ ನಾಲ್ಕಾರು ಕಡೆಯ ಸರ್ವ ಸಮರ್ಥ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬ ಸಮರ್ಥ ಮಗು ತನ್ನ ಸಾಮರ್ಥ್ಯದ ಪ್ರಮಾಣ ಮುಂದುವರೆಯುತ್ತಿದ್ದಾರೆ. ಈ ಸಮರ್ಥ ಜೀವನ ಅರ್ಥಾತ್ ಸುಖಮಯ ಶ್ರೇಷ್ಠ ಸಫಲತಾ ಸಂಪನ್ನ ಅಲೌಕಿಕ ಜೀವನದ ಆಧಾರವೇನಾಗಿದೆ? ಇದಕ್ಕೆ ಆಧಾರವಾಗಿದೆ ಒಂದು ಶಬ್ದ 'ಸ್ಮೃತಿ' ವಾಸ್ತವದಲ್ಲಿ ಇಡೀ ಡ್ರಾಮಾದ ಆಟವೇ ಸ್ಮೃತಿ ಮತ್ತು ವಿಸ್ಮೃತಿಯದಾಗಿದೆ. ಈ ಸಮಯದಲ್ಲಿ ಸ್ಮೃತಿಯ ಆಟವು ನಡೆಯುತ್ತಿದೆ, ಬಾಪ್‍ದಾದಾ ತಮ್ಮೆಲ್ಲರನ್ನು ಯಾವ ಆಧಾರದ ಮೇಲೆ ಪರಿವರ್ತನೆ ಮಾಡಿದರು? ಕೇವಲ ಸ್ಮೃತಿ ತರಿಸಿದರು- ತಾವು ಆತ್ಮರಾಗಿದ್ದೀರಿ. ಶರೀರವಲ್ಲ, ಈ ಸ್ಮೃತಿಯು ಎಷ್ಟೊಂದು ಅಲೌಕಿಕ ಪರಿವರ್ತನೆ ಮಾಡಿಬಿಟ್ಟಿತು. ಎಲ್ಲವೂ ಬದಲಾಯಿತಲ್ಲವೆ! ಮಾನವ ಜೀವನದ ವಿಶೇಷತೆಯೇ ಸ್ಮೃತಿಯಾಗಿದೆ. ಸ್ಮೃತಿಯು ಬೀಜವಾಗಿದೆ. ಈ ಬೀಜದಿಂದ ವೃತ್ತಿ, ದೃಷ್ಟಿ, ಕೃತಿ, ಇಡೀ ಸ್ಥಿತಿಯೇ ಬದಲಾಗಿ ಬಿಡುತ್ತದೆ ಆದ್ದರಿಂದಲೇ ಎಂತಹ ಸ್ಮೃತಿಯೋ ಅಂತಹ ಸ್ಥಿತಿಯೆಂದು ಗಾಯನವಿದೆ. ತಳಪಾಯವಾದ ಸ್ಮೃತಿಯನ್ನೇ ತಂದೆಯು ಪರಿವರ್ತನೆ ಮಾಡಿದರು. ತಳಪಾಯವು ಶ್ರೇಷ್ಠವಾದಾಗ ಸ್ವತಹವಾಗಿ ಇಡೀ ಜೀವನವೇ ಶ್ರೇಷ್ಠವಾಯಿತು. ಎಷ್ಟು ಚಿಕ್ಕ ಮಾತಿನ ಪರಿವರ್ತನೆ ಮಾಡಿದರು- ನೀವು ಶರೀರವಲ್ಲ, ಆತ್ಮರಾಗಿದ್ದೀರಿ. ಈ ಪರಿವರ್ತನೆ ಆಗುತ್ತಿದ್ದಂತೆಯೇ ಅತ್ಮವು ಮಾಸ್ಟರ್ ಸರ್ವಶಕ್ತಿವಂತನಾಗಿರುವ ಕಾರಣ ಸ್ಮೃತಿ ಬರುತ್ತಿದ್ದಂತೆಯೇ ಸಮರ್ಥವಾಗಿ ಬಿಟ್ಟಿತು. ಈಗ ಈ ಸಮರ್ಥ ಜೀವನವು ಎಷ್ಟು ಪ್ರಿಯವೆನಿಸುತ್ತದೆ! ಸ್ವಯಂ ಸ್ಮೃತಿ ಸ್ವರೂಪರಾದಿರಿ ಮತ್ತು ಅನ್ಯರಿಗೂ ಸಹ ಇದೇ ಸ್ಮೃತಿಯನ್ನು ತರಿಸಿ ಹೇಗಿದ್ದವರನ್ನು ಹೇಗೆ ಮಾಡಿಬಿಡುತ್ತೀರಿ! ಈ ಸ್ಮೃತಿಯಿಂದ ಸಂಸಾರವೇ ಬದಲಾಯಿತು. ಈ ಈಶ್ವರೀಯ ಸಂಸಾರವು ಎಷ್ಟು ಪ್ರಿಯವಾಗಿದೆ! ಭಲೆ ಸೇವಾರ್ಥ ಸಂಸಾರಿ ಆತ್ಮರ ಜೊತೆ ಇರುತ್ತೀರಿ ಆದರೆ ಮನಸ್ಸು ಸದಾ ಅಲೌಕಿಕ

ಸಂಸಾರದಲ್ಲಿರುತ್ತದೆ. ಅಂತಹವರಿಗೆ ಸ್ಮೃತಿ ಸ್ವರೂಪರೆಂದು ಹೇಳಲಾಗುತ್ತದೆ. ಯಾವುದೇ ಪರಿಸ್ಥಿತಿ ಬರಲಿ ಆದರೆ ಸ್ಮೃತಿಸ್ವರೂಪ ಅತ್ಮರು ಸಮರ್ಥವಾಗಿರುವ ಕಾರಣ ಪರಿಸ್ಥಿತಿಯನ್ನು ಏನೆಂದು ತಿಳಿಡುಕೊಳ್ಳುತ್ತಾರೆ! ಇದು ಆಟವಾಗಿದೆ ಎಂದು ತಿಳಿದುಕೊಳ್ಳುತ್ತಾರೆ. ಎಂದೂ ಗಾಬರಿ ಆಗುವುದಿಲ್ಲ. ಭಲೆ ಎಷ್ಟೇ ದೊಡ್ಡ ಪರಿಸ್ಥಿತಿಯಾಗಿರಲಿ ಆದರೆ ಸಮರ್ಥ ಆತ್ಮನಿಗಾಗಿ ಗುರಿಯನ್ನು ತಲುಪಲು ಇವೆಲ್ಲವೂ ಮಾರ್ಗದ ಬದಿಯ ದೃಶ್ಯಗಳಾಗಿವೆ. ಸೈಡ್ಸೀನ್ ನೋಡಲು ಇಷ್ಟವಾಗುತ್ತದೆ ಅಲ್ಲವೆ. ಖರ್ಚು ಮಾಡಿಯಾದರೂ ನೋಡಲು ಹೋಗುತ್ತಾರೆ. ಇಲ್ಲಿಯೂ ಸಹ ಇತ್ತೀಚೆಗೆ ಅಬು ಪರ್ವತವನ್ನು ದರ್ಶನ ಮಾಡಲು ಹೋಗುತ್ತೀರಲ್ಲವೆ. ಒಂದುವೇಳೆ ಮಾರ್ಗದಲ್ಲಿ ಬದಿದೃಶ್ಯಗಳಿಲ್ಲವೆಂದರೆ ಆ ಮಾರ್ಗವು ಚೆನ್ನಾಗಿರುತ್ತದೆಯೇ? ಬೋರ್ ಆಗಿ ಬಿಡುತ್ತದೆ. ಹಾಗೆಯೇ ಸ್ಮೃತಿರೂಪ, ಸಮರ್ಥ ಸ್ವರೂಪ ಅತ್ಮರಿಗೆ ಪರಿಸ್ಥಿತಿ ಎಂದಾದರೂ ಹೇಳಿ, ಪರೀಕ್ಷೆ, ವಿಘ್ನ ಎಂದಾದರೂ ಹೇಳಿ, ಸಮಸ್ಯೆ ಗಳೆಂದಾದರೂ ಹೇಳಿ ಎಲ್ಲವೂ ಬದಿದೃಶ್ಯಗಳಾಗಿವೆ ಏಕೆಂದರೆ ಗುರಿಯನ್ನು ತಲುಪಲು ಇಂತಹ ಬದಿ ದೃಶ್ಯಗಳನ್ನು ಅನೇಕ ಬಾರಿ ಪಾರು ಮಾಡಿದ್ದೇವೆ ಎಂದು ಅವರಿಗೆ ಸ್ಮೃತಿಯಲ್ಲಿರುತ್ತದೆ. ಹೊಸದೇನಲ್ಲ(ನಥಿಂಗ್ ನ್ಯೂ) ಎಂದು ತಿಳಿಯುತ್ತಾರೆ ಇದಕ್ಕೂ ತಳಪಾಯ ಯಾವುದು ಸ್ಮೃತಿ. ಒಂದು ವೇಳೆ ಈ ಸ್ಮೃತಿ ಅರ್ಥಾತ್ ತಳಪಾಯವು ಅಲುಗಾಡಿದರೆ ಜೀವನದ ಇಡೀ ಕಟ್ಟಡವೇ ಅಲುಗಾಡತೊಡಗುತ್ತದೆ. ತಾವಂತೂ ಅಚಲರಾಗಿದ್ದೀರಲ್ಲವೇ.

ಇಡೀ ವಿದ್ಯೆಯ ನಾಲ್ಕು ಸಬ್ಜೆಕ್ಟ್ ಗಳ ಆಧಾರವು ಸಹ ಸ್ಮೃತಿಯಾಗಿದೆ. ಎಲ್ಲದಕ್ಕಿಂತ ಮುಖ್ಯವಾದ ಸಬ್ಜೆಕ್ಟ್ ನೆನಪಾಗಿದೆ. ನೆನಪು ಅರ್ಥಾತ್ ಸ್ಮೃತಿ  ನಾನು ಯಾರು? ತಂದೆಯಾರು? ಎಂಬ ಸ್ಮೃತಿ. ಎರಡನೆಯ ಸಬ್ಜೆಕ್ಟ್ ಜ್ಞಾನವಾಗಿದೆ – ರಚಯಿತ ಮತ್ತು ರಚನೆಯ ಜ್ಞಾನವು ಸಿಕ್ಕಿತು. ಅನಾದಿಯಲ್ಲಿ ಏನಾಗಿದ್ದಿರಿ ಮತ್ತು ಅದಿಯಲ್ಲಿ ಏನಾಗಿದ್ದಿರಿ ಮತ್ತು ವರ್ತಮಾನ ಸಮಯದಲ್ಲಿ ಏನಾಗಿದ್ದೀರಿ. ಬ್ರಾಹ್ಮಣ ಸೋ ಫರಿಶ್ತಾ, ಫರಿಶ್ತಾ ಸೋ ದೇವತಾ ಎಂದು ಸ್ಮೃತಿ ಕೊಡಿಸಿದರು. ಇನ್ನೂ ಎಷ್ಟೊಂದು ಸ್ಮೃತಿಗಳನ್ನು ತರಿಸಿದ್ದಾರೆ ಅಂದಮೇಲೆ ಜ್ಞಾನದ ಸ್ಮೃತಿ ಆಯಿತಲ್ಲವೇ. ಮೂರನೇ ಸಬ್ಜೆಕ್ಟ್ ಆಗಿದೆ- ದಿವ್ಯಗುಣಗಳು. ತಮ್ಮ ಬ್ರಾಹ್ಮಣರ ದಿವ್ಯಗುಣಗಳ ಸ್ಮೃತಿಯನ್ನು ತರಿಸಿದೆವು. ಗುಣಗಳ ಪಟ್ಟಿಯೂ ಬಹಳಚೆನ್ನಾಗಿ ಸ್ಮೃತಿಯಲ್ಲಿರುತ್ತದೆ ಆದ್ದರಿಂದ ಸಮಯ ಪ್ರಮಾಣ ಆ ಗುಣವನ್ನು ಕಾರ್ಯದಲ್ಲಿ, ಕರ್ಮದಲ್ಲಿ ತೊಡಗಿಸುತ್ತೀರಿ. ಯಾವುದೇ ಸಮಯದಲ್ಲಿ ಸ್ಮೃತಿಯು ಕಡಿಮೆಯಾದರೆ ಫಲಿತಾಂಶವೇನಾಗುತ್ತದೆ? ಆ ಸಮಯಕ್ಕೆ ಆ ಗುಣವನ್ನು ಉಪಯೋಗಿಸಲು ಸಾಧ್ಯವಾಗುವುದಿಲ್ಲ. ಸಮಯವು ಕಳೆದುಹೋದ ನಂತರ ಸ್ಮೃತಿಗೆ ಬರುತ್ತದೆ. ಇದನ್ನು ಮಾಡಬಾರದಾಗಿತ್ತು ಆದರೆ ಆಗಿಹೋಯಿತು. ಮುಂದೆ ಈ ರೀತಿ ಮಾಡುವುದಿಲ್ಲ ಅಂದಮೇಲೆ ದಿವ್ಯಗುಣಗಳನ್ನು ಕರ್ಮದಲ್ಲಿ ತರಬೇಕಾದರೂ ಸಹ ಆ ಸಮಯಕ್ಕೆ ಸ್ಮೃತಿ ಬೇಕು. ನಿಮ್ಮ ಮೇಲೆ ನಿಮಗೇ ನಗು ಬರುತ್ತದೆಯಲ್ಲವೇ. ಯಾವುದೇ ಮಾತು ಅಥವಾ ಯಾವುದೇ ವಸ್ತು ಸಮಯದಲ್ಲಿ ಮರೆತು ಹೋಗುತ್ತದೆ ಎಂದರೆ ಆ ಸಮಯದ ಪರಿಸ್ಥಿತಿ ಏನಾಗುತ್ತದೆ? ವಸ್ತು ಇರುತ್ತದೆ ಆದರೆ ಆ ಸಮಯಕ್ಕೆ ನೆನಪಿಗೆ ಬರುವುದಿಲ್ಲ ಆಗ ಗಾಬರಿ ಆಗುತ್ತೀರಲ್ಲವೆ. ಹಾಗೆಯೇ ಇದೂ ಸಹ ಸಮಯಕ್ಕೆ ಸ್ಮೃತಿ ಬರದಿರುವ ಕಾರಣ ಆಗಾಗ ಗಾಬರಿ ಆಗುತ್ತೀರಿ. ಅಂದಾಗ ದಿವ್ಯ ಗುಣಗಳ ಆಧಾರವೇನಾಯಿತು? ಸದಾ ಸ್ಮೃತಿ ಸ್ವರೂಪ. ಆಗ ನಿರಂತರ ಮತ್ತು ನ್ಯಾಚುರಲ್ ದಿವ್ಯಗುಣಗಳು ಸಹಜವಾಗಿ ಪ್ರತೀ ಕರ್ಮದಲ್ಲಿ, ಕಾರ್ಯದಲ್ಲಿ ತೊಡಗುತ್ತಾ ಇರುತ್ತವೆ. ನಾಲ್ಕನೇ ಸಜ್ಜೆಕ್ಟ್ ಆಗಿದೆ - ಸೇವೆ. ಇದರಲ್ಲಿಯೂ ನಾನು ವಿಶ್ವಕಲ್ಯಾಣಕಾರಿ ಆತ್ಮ ನಿಮಿತ್ತನಾಗಿದ್ದೇನೆ ಎಂದು ಒಂದುವೇಳೆ ಸ್ಮೃತಿ ಸ್ವರೂಪರಾಗಲಿಲ್ಲವೆಂದರೆ ಸೇವೆಯಲ್ಲಿ ಸಫಲತೆಯನ್ನು ಪಡೆಯಲು ಸಾಧ್ಯವಿಲ್ಲ. ಸೇವೆಯ ಮೂಲಕ ಯಾವುದೇ ಆತ್ಮನನ್ನು ಸ್ಮೃತಿ ಸ್ವರೂಪರನ್ನಾಗಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸ್ವಯಂನ ಮತ್ತು ತಂದೆಯ ಸ್ಮೃತಿ ತರಿಸುವುದೇ ಸೇವೆಯಾಗಿದೆ.

ಅಂದಾಗ ನಾಲ್ಕೂ  ಸಬ್ಜೆಕ್ಟ್  ತಳಪಾಯವು ಸ್ಮೃತಿಯಾಯಿತಲ್ಲವೇ. ಇಡೀ ಜ್ಞಾನದ ಸಾರವು ಒಂದು ಶಬ್ದವಾಯಿತು - ಸ್ಮೃತಿ. ಆದ್ದರಿಂದ ಬಾಪ್‌ದಾದಾ ಮೊದಲೇ ತಿಳಿಸಿದ್ದಾರೆ- ಅಂತಿಮ ಪರೀಕ್ಷೆಯ ಪ್ರಶ್ನೆಯೂ ಸಹ ಏನು ಬರುವುದು? ಬಹಳ ಉದ್ದಗಲವಾದ ಪ್ರಶ್ನೆ ಇರುವುದಿಲ್ಲ. ಒಂದೇ ಪ್ರಶ್ನೆಯ ಪರೀಕ್ಷೆಯಿರುವುದು ಮತ್ತು ಒಂದೇ ಸೆಕೆಂಡಿನ ಪರೀಕ್ಷೆಯಿರುವುದು. ಯಾವ

ಪ್ರಶ್ನೆಯಿರುವುದು? ನಷ್ಟೋಮೋಹ ಸ್ಮೃತಿಸ್ವರೂಪ ಪ್ರಶ್ನೆಯನ್ನೂ ಸಹ ಮೊದಲೇ ಕೇಳಿಸಿಕೊಂಡಿದ್ದೀರಿ ಅಂದಮೇಲೆ ಎಲ್ಲರೂ ತೇರ್ಗಡೆಯಾಗಬೇಕು. ಎಲ್ಲರೂ ನಂಬರ್‌ವನ್ ಉತ್ತೀರ್ಣರಾಗುವಿರೊ ಅಥವಾ ನಂಬರ್‌ವಾರ್ ಆಗುವಿರೋ?

ಡಬಲ್ ವಿದೇಶಿಯರು ಯಾವ ನಂಬರಿನಲ್ಲಿ ತೇರ್ಗಡೆಯಾಗುತ್ತೀರಿ? (ನಂಬರ್‌ವನ್). ಅಂದಮೇಲೆ ಮಾಲೆಯನ್ನು ಸಮಾಪ್ತಿ ಮಾಡುವುದೇ? ಅಥವಾ ಪ್ರತ್ಯೇಕ ಮಾಲೆಯನ್ನು ತಯಾರು ಮಾಡುವುದೇ? ಉಮ್ಮಂಗವು ಬಹಳ ಚೆನ್ನಾಗಿದೆ. ಡಬಲ್ ವಿದೇಶಿಯರಿಗೆ ಲಾಸ್ಟ್ ಸೋ ಫಾಸ್ಟ್ ಹೋಗುವ ವಿಶೇಷ ಅವಕಾಶವಿದೆ. ಒಂದುವೇಳೆ ಮಾಲೆಯನ್ನು ಪ್ರತ್ಯೇಕವಾಗಿ ತಯಾರು ಮಾಡಿದರೆ ಪಿಕ್ನಿಕ್ ಸ್ಥಾನಗಳಲ್ಲಿ ಹೋಗಬೇಕಾಗುವುದು. ಇದು ಇಷ್ಟವಾದರೆ ಬೇರೆ ಮಾಲೆಯನ್ನು ಮಾಡುತ್ತೇನೆ. ತಮ್ಮೆಲ್ಲರಿಗೆ ಮಾಲೆಯಲ್ಲಿ ಬರುವ ಅವಕಾಶವನ್ನು ಇಡಲಾಗಿದೆ. ಬಂದುಬಿಡುತ್ತೀರಿ. ಒಳ್ಳೆಯದು-

ಎಲ್ಲಾ ಶಿಕ್ಷಕಿ ಸಹೋದರಿಯರು ಸ್ಮೃತಿ ಸ್ವರೂಪರಾಗಿದ್ದೀರಲ್ಲವೆ. ನಾಲ್ಕೂ ಸಬ್ಜೆಕ್ಟ್‌ಗಳಲ್ಲಿ ಸ್ಮೃತಿ ಸ್ವರೂಪರು, ಪರಿಶ್ರಮದ ಕೆಲಸವಂತೂ ಇಲ್ಲವಲ್ಲವೆ! ಟೀಚರ್ಸ್ ಅರ್ಥವೇ ಆಗಿದೆ- ತನ್ನ ಸ್ಮೃತಿ ಸ್ವರೂಪ ಲಕ್ಷಣಗಳಿಂದ ಅನ್ಯರನ್ನೂ ಸ್ಮೃತಿ ಸ್ವರೂಪರನ್ನಾಗಿ ಮಾಡುವುದು. ತಮ್ಮ ಚಹರೆಯೇ ಅನ್ಯರಿಗೆ ಸ್ಮೃತಿ ತರಿಸಲಿ ನಾನಾತ್ಮನಾಗಿದ್ದೇನೆ. ಮಸ್ತಕದಲ್ಲಿ ಹೊಳೆಯುತ್ತಿರುವ ಆತ್ಮ ಅಥವಾ ಮಣಿಯನ್ನೇ ನೋಡಲಿ. ಹೇಗೆ ಸರ್ಪದ ಮಣಿಯನ್ನು ನೋಡಿ ಸರ್ಪದ ಕಡೆ ಯಾರ ಗಮನವೂ ಹೋಗುವುದಿಲ್ಲ. ಮಣಿಯ ಕಡೆಯೇ ಹೋಗುತ್ತದೆ. ಹಾಗೆಯೇ ಅವಿನಾಶಿ ಹೊಳೆಯುತ್ತಿರುವ ಮಣಿಯನ್ನು ನೋಡಿ ದೇಹಭಾನವು ಸ್ಮೃತಿಯಲ್ಲಿ ಬರಲೇ ಬಾರದು. ಗಮನವೆಲ್ಲವೂ ಸ್ವತಹವಾಗಿ ಆತ್ಮನ ಕಡೆ ಹೋಗಲಿ, ಟೀಚರ್ಸ್ ಇದೇ ಸೇವೆಗೆ ನಿಮಿತ್ತರಾಗಿದ್ದೀರಿ. ವಿಸ್ಮೃತಿಯಾದವರಿಗೆ ಸ್ಮೃತಿ ತರಿಸುವುದೇ ಸೇವೆಯಾಗಿದೆ. ಸಮರ್ಥರಂತೂ ಆಗಿದ್ದೀರಿ ಅಥವಾ ಕೆಲಕೆಲವೊಮ್ಮೆ ಗಾಬರಿಯಾಗುತ್ತೀರಾ? ಒಂದುವೇಳೆ ಶಿಕ್ಷಕಿಯರು ಗಾಬರಿಯಾಗಿಬಿಟ್ಟರೆ ವಿದ್ಯಾರ್ಥಿಗಳೇನಾಗುವರು? ಟೀಚರ್ಸ್ ಅರ್ಥಾತ್ ಸದಾ ನ್ಯಾಚುರಲ್, ನಿರಂತರ ಸ್ಮೃತಿ ಸ್ವರೂಪರಿಂದ ಸಮರ್ಥ ಸ್ವರೂಪರು. ಹೇಗೆ ಬ್ರಹ್ಮಾತಂದೆಯು ಎಲ್ಲರಿಗಿಂತ ಮುಂದೆ ಇದ್ದರು ಹಾಗೆಯೇ ಶಿಕ್ಷಕಿಯರೂ ಮುಂದೆ ಇದ್ದೀರಲ್ಲವೆ. ನಿಮಿತ್ತರೆಂದರೆ ಮುಂದೆ ಇರುವವರು. ಹೇಗೆ ಸೇವೆಯ ಪ್ರತಿ ಸಮರ್ಪಣೆ ಆಗುವುದರಲ್ಲಿ ಸಾಹಸವನ್ನು ಇಟ್ಟಿದ್ದೀರಿ, ಸಮರ್ಥರಾದಿರಿ ಅಂದಾಗ ಈ ಸ್ಮೃತಿ ಏನಾಗಿದೆ. ಇದಂತೂ ತ್ಯಾಗದ ಭಾಗ್ಯವಾಗಿದೆ. ತ್ಯಾಗ ಮಾಡಿದಿರಿ, ಈಗ ಭಾಗ್ಯದ್ದೇನು ದೊಡ್ಡ ಮಾತು? ತ್ಯಾಗ ಮಾಡಿದಿರಿ ಆದರೆ ತ್ಯಾಗವು ತ್ಯಾಗವಲ್ಲ ಏಕೆಂದರೆ ಪ್ರಾಪ್ತಿಯು ಬಹಳಷ್ಟಿದೆ. ತ್ಯಾಗವನ್ನೇನು ಮಾಡಿದಿರಿ ಕೇವಲ ಬಿಳಿಯ ಸೀರೆಯನ್ನು ಧರಿಸಿದಿರಿ. ಇದರಿಂದ ಇನ್ನೂ ಬ್ಯೂಟಿಫುಲ್ (ಸುಂದರ) ಆಗಿಬಿಟ್ಟಿದ್ದೀರಿ. ಫರಿಶ್ತೆಗಳು, ಪರಿಗಳಾಗಿಬಿಟ್ಟಿದ್ದೀರಿ. ಮತ್ತೇನು ಬೇಕು! ಬಾಕಿ ಆಹಾರ-ಪಾನೀಯಗಳನ್ನು ಬಿಟ್ಟಿದ್ದೀರಿ. ಅದಂತೂ ಈಗಿನ ವೈದ್ಯರೂ ಸಹ ಹೇಳುತ್ತಾರೆ. ಹೆಚ್ಚಾಗಿ ತಿನ್ನಬೇಡಿ, ಕಡಿಮೆ ತಿನ್ನಿರಿ. ಸಾಧಾರಣ ಭೋಜನವನ್ನು ತಿನ್ನಿರಿ. ಇತ್ತೀಚೆಗಂತೂ ವೈದ್ಯರೂ ಸಹ ತಿನ್ನಲು ಬಿಡುವುದಿಲ್ಲ ಅಂದಮೇಲೆ ಏನನ್ನು ಬಿಟ್ಟಿದ್ದೀರಿ? ಆಭರಣ ಧರಿಸುವುದನ್ನು ಬಿಟ್ಟಿರುವಿರಿ ಈಗಿನ ಕಾಲದಲ್ಲಂತೂ ಆಭರಣಗಳಿಗೆ ಕಳ್ಳರು ಹಿಂದೆ ಬರುತ್ತಾರೆ. ಅದನ್ನು ಬಿಟ್ಟು ಒಳ್ಳೆಯದನ್ನೇ ಮಾಡಿದಿರಿ. ಬುದ್ಧಿವಂತಿಕೆಯ ಕೆಲಸವೇ ಮಾಡಿದಿರಿ ಆದ್ದರಿಂದ ತ್ಯಾಗದ ಪದಮದಷ್ಟು ಭಾಗ್ಯವು ಸಿಕ್ಕಿಬಿಟ್ಟಿತು. ಒಳ್ಳೆಯದು-

ಈಗೀಗ ಬಾಪ್‌ದಾದಾರವರಿಗೆ ಅಥೆನ್ಸ್‌ನವರು ನೆನಪಿಗೆ ಬರುತ್ತಿದ್ದಾರೆ. (ಅಥೆನ್ಸ್‌ನಲ್ಲಿ ಬಹಳ ದೊಡ್ಡ ಕಾರ್ಯಕ್ರಮವು ನಡೆಯುತ್ತಿದೆ) ಅವರೂ ಸಹ ಬಹಳ ನೆನಪು ಮಾಡಿಕೊಳ್ಳುತ್ತಿದ್ದಾರೆ. ಯಾವುದೇ ವಿಶಾಲಕಾರ್ಯವಾಗುತ್ತದೆ ಎಂದರೆ ಬೇಹದ್ದಿನ ಕಾರ್ಯದಲ್ಲಿ ಬೇಹದ್ದಿನ ತಂದೆ ಮತ್ತು ಬೇಹದ್ದಿನ ಪರಿವಾರವು ಅವಶ್ಯವಾಗಿ ನೆನಪಿಗೆ ಬರುತ್ತದೆ. ಯಾರೆಲ್ಲಾ ಮಕ್ಕಳು ಹೋಗಿದ್ದಾರೆಯೋ ಎಲ್ಲರೂ ಸಾಹಸವಂತ ಮಕ್ಕಳಾಗಿದ್ದಾರೆ. ಯಾರು ನಿಮಿತ್ತರಾಗಿದ್ದಾರೆಯೋ ಅವರ ಸಾಹಸವು ಕಾರ್ಯವನ್ನು ಶ್ರೇಷ್ಠ ಮತ್ತು ಅಚಲವನ್ನಾಗಿ ಮಾಡಿ ಬಿಡುತ್ತದೆ. ತಂದೆಯ ಸ್ನೇಹ ಮತ್ತು ವಿಶೇಷ ಆತ್ಮರ ಶುಭಕಾಮನೆ-ಶುಭಭಾವನೆಯು ಮಕ್ಕಳ ಜೊತೆಯಿದೆ. ಬುದ್ಧಿವಂತರಿಗೂ ಬುದ್ಧಿವಂತನಾದ ತಂದೆಯು ಯಾರ ಮೂಲಕವಾದರೂ ನಿಮಿತ್ತರನ್ನಾಗಿ ಮಾಡಿ ತನ್ನ ಕಾರ್ಯವನ್ನು ಮಾಡಿಸಿಕೊಳ್ಳುತ್ತಾರೆ ಆದ್ದರಿಂದ ನಿಶ್ಚಿಂತ ಚಕ್ರವರ್ತಿಗಳಾಗಿ, ಲೈಟ್ ಹೌಸ್, ಮೈಟ್ ಹೌಸ್ ಆಗಿ. ಶುಭಭಾವನೆ- ಶುಭಕಾಮನೆಯ

ವೈಬ್ರೇಷನ್ ಹರಡುತ್ತಾ ಇರಿ. ಪ್ರತಿಯೊಬ್ಬ ಸೇವಾಧಾರಿ ಮಗುವಿಗೆ ಬಾಪ್‌ದಾದಾರವರು ಹೆಸರು ಮತ್ತು ವಿಶೇಷತೆಯ ಸಹಿತವಾಗಿ ನೆನಪು-ಪ್ರೀತಿಯನ್ನು ಕೊಡುತ್ತಿದ್ದೇವೆ. ಒಳ್ಳೆಯದು-

**ಸದಾ ನಿರಂತರ ಸ್ಮೃತಿಸ್ವರೂಪ ಸಮರ್ಥ ಆತ್ಮರಿಗೆ, ಸದಾ ಸ್ಮೃತಿ ಸ್ವರೂಪರಾಗಿ ಪ್ರತಿಯೊಂದು ಪರಿಸ್ಥಿತಿಯನ್ನು ಸೈಡ್‌ಸೀನಿನಂತೆ ಅನುಭವ ಮಾಡುವಂತಹ ವಿಶೇಷ ಅತ್ಮರಿಗೆ ಸದಾ ತಂದೆಯ ಸಮಾನ ನಾಲ್ಕಾರು ಕಡೆ ಸ್ಮೃತಿಯ ಅಲೆಯನ್ನು ಹರಡಿಸುವಂತಹ ಮಹಾವೀರ ಮಕ್ಕಳಿಗೆ. ಸದಾ ತೀವ್ರಗತಿಯಿಂದ ಪಾಸ್-ವಿತ್-ಆನರ್ ಆಗುವಂತಹ ಮಹಾರಥಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದೆಹಲಿ ಜೋನ್‌ನವರೊಂದಿಗೆ ಅವ್ಯಕ್ತ ಬಾಪ್‌ದಾದಾರವರ ವಾರ್ತಾಲಾಪ:** ಸದಾ ತಮ್ಮ ಭಾಗ್ಯವನ್ನು ನೋಡುತ್ತಾ ಹರ್ಷಿತವಾಗುತ್ತೀರಾ! ಸದಾ 'ವಾಹ್-ವಾಹ್' ಹಾಡನ್ನಾಡುತ್ತೀರಾ? ಅಯ್ಯೋ-ಅಯ್ಯೋ ಎಂಬ ಹಾಡು ಸಮಾಪ್ತಿಯಾಯಿತೆ ಅಥವಾ ಕೆಲವೊಮ್ಮೆ ದುಃಖದ ಅಲೆಗಳು ಬರುತ್ತವೆಯೇ? ದುಃಖದ ಪ್ರಪಂಚದಿಂದ ದೂರವಾಗಿದ್ದೀರಿ ಮತ್ತು ತಂದೆಯ ಪ್ರಿಯರಾಗಿದ್ದೀರಿ. ಆದ್ದರಿಂದ ದುಃಖದ ಅಲೆಗಳು ತಮ್ಮನ್ನು ಸ್ಪರ್ಷಿಸುವುದಕ್ಕೂ ಸಾಧ್ಯವಿಲ್ಲ. ಭಲೆ ಸೇವಾರ್ಥವಾಗಿ ಇರುತ್ತೀರಿ ಆದರೆ ಕಮಲ ಸಮಾನರಾಗಿರುತ್ತೀರಿ. ಕಮಲ ಪುಷ್ಪವು ಕೆಸರಿನಿಂದ ಹೊರಬರುವುದಿಲ್ಲ, ಅದರಲ್ಲಿಯೇ ಇರುತ್ತದೆ ಆದರೂ ಭಿನ್ನವಾಗಿರುತ್ತದೆ. ಈ ರೀತಿ ಭಿನ್ನವಾಗಿದ್ದೀರಾ?ಭಿನ್ನವಾಗಿರುವುದರ ಚಿಹ್ನೆಯಾಗಿದೆ - ಎಷ್ಟು ಭಿನ್ನವೋ ಅಷ್ಟು ತಂದೆಯ ಪ್ರಿಯರಾಗುವಿರಿ. ಸ್ವತಹವಾಗಿಯೇ ತಂದೆಯ ಪ್ರೀತಿಯ ಅನುಭವವಾಗುವುದು ಮತ್ತು ಪರಮಾತ್ಮನ ಈ ಪ್ರೀತಿಯು ಛತ್ರಛಾಯೆಯಾಗುವುದು. ಯಾರ ಮೇಲೆ ಛತ್ರಛಾಯೆಯಿರುತ್ತದೆಯೋ ಅವರೆಷ್ಟು ಸುರಕ್ಷಿತವಾಗಿರುತ್ತಾರೆ! ಯಾರ ಮೇಲೆ ಪರಮಾತ್ಮನ ಛತ್ರಛಾಯೆಯಿದೆ. ಅವರನ್ನಾ ರು ಏನು ಮಾಡಲು ಸಾಧ್ಯ! ಆದ್ದರಿಂದ ನಶೆಯಲ್ಲಿರಿ- ನಾವು ಪರಮಾತ್ಮನ ಛತ್ರಛಾಯೆಯಲ್ಲಿರುವವರು. ಇದು ಅಭಿಮಾನವಲ್ಲ ಆದರೆ ಆತ್ಮಿಕ ನಶೆಯಾಗಿದೆ. ದೇಹಾಭಿಮಾನವಿದ್ದರೆ ಅಭಿಮಾನ ಬರುತ್ತದೆ. ಆತ್ಮಾಭಿಮಾನಿಯಾಗಿದ್ದರೆ ಅಭಿಮಾನ ಬರುವುದಿಲ್ಲ ಆದರೆ ಆತ್ಮಿಕ ನಶೆಯಿರುತ್ತದೆ ಮತ್ತು ಎಲ್ಲಿ ನಶೆಯಿರುವುದೋ ಅಲ್ಲಿ ವಿಘ್ನವುಂಟಾಗಲು ಸಾಧ್ಯವಿಲ್ಲ. ಎಲ್ಲಾದರೂ ಇದ್ದರೆ ಚಿಂತೆಯಿರುತ್ತದೆ ಅಥವಾ ನಶೆಯಿರುತ್ತದೆ. ಎರಡೂ ಒಟ್ಟಿಗೆ ಇರುವುದಿಲ್ಲ. ಬಹಳ ಚೆನ್ನಾಗಿರುವ ರೊಟ್ಟಿಪಲ್ಯವನ್ನು ಕೊಡುವುದಕ್ಕಾಗಿ ಬಾಪ್‌ದಾದಾರವರು ಬಂಧಿತನಾಗಿದ್ದಾರೆ. ಪ್ರತಿನಿತ್ಯವೂ 36 ಪ್ರಕಾರದ ಭೋಜನವನ್ನು ಕೊಡುವುದಿಲ್ಲ ಆದರೆ ಅವಶ್ಯವಾಗಿ ರೊಟ್ಟಿಪಲ್ಯವಂತು ಸಿಗುತ್ತದೆ. ಇದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ, ನೊಂದಣಿಯಿದೆ ಅಂದಮೇಲೆ ಯಾವ ಮಾತಿಗಾಗಿ ಚಿಂತೆ ಮಾಡುವುದು! ಪ್ರಪಂಚದಲ್ಲಿ ಇರುವವರಿಗಂತು ಈ ಚಿಂತೆಯಿರುತ್ತದೆ- ನಾವೂ ಅನುಭವಿಸಬೇಕು. ನಮ್ಮ ನಂತರದವರೂ ಅನುಭವಿಸಲಿ, ಅಂದಮೇಲೆ ತಾವೂ ಸಹ ಹಸಿವಿನಿಂದ ಇರುವುದಿಲ್ಲ. ನಂತರ ಬರುವವರೂ ಹಸಿವಿನಿಂದ ಇರುವುದಿಲ್ಲ. ಇನ್ನೇನು ಬೇಕು? ಡನ್‌ಲಪ್ ಹಾಸಿಗೆ ಬೇಕಾ! ಒಂದುವೇಳೆ ಡನ್‌ಲಪ್ ಹಾಸಿಗೆಯಲ್ಲಿ ಚಿಂತೆಯ ನಿದ್ರೆಯಿದ್ದರೆ ನಿದ್ರೆ ಬರುವುದೇ? ನಿಶ್ಚಿಂತರಾಗಿದ್ದರೆ ನೆಲದ ಮೇಲೆ ಮಲಗಿದರೂ ನಿದ್ರೆ ಬರುತ್ತದೆ. ಭುಜವನ್ನು ತಮ್ಮ ದಿಂಬನ್ನಾಗಿ ಮಾಡಿಕೊಂಡರೂ ನಿದ್ರೆ ಬರುತ್ತದೆ. ಎಲ್ಲಿ ಪ್ರೀತಿಯಿದೆಯೋ ಅಲ್ಲಿನ ಒಣರೊಟ್ಟಿಯೂ 36 ಪ್ರಕಾರದ ಭೋಜನವೆನಿಸುತ್ತದೆ ಆದ್ದರಿಂದ ನಿಶ್ಚಿಂತ ಚಕ್ರವರ್ತಿ ಆಗಿದ್ದೀರಿ. ನಿಶ್ಚಿಂತವಾಗಿರುವ ಈ ರಾಜ್ಯಭಾಗ್ಯದಲ್ಲಿ ಎಲ್ಲರೂ ರಾಜರಿಗಿಂತಲೂ ಶ್ರೇಷ್ಠರು. ಒಂದುವೇಳೆ ಕಿರೀಟ ಧರಿಸಿ ಸಿಂಹಾಸನದಲ್ಲಿ ಕುಳಿತುಕೊಳ್ಳುತ್ತೀರಿ, ಮತ್ತೆ ಚಿಂತೆ ಮಾಡುತ್ತಾ ಇರುತ್ತೀರೆಂದರೆ ಅದು ಸಿಂಹಾಸನವಾಯಿತೇ ಅಥವಾ ಚಿಂತೆಯಾಯಿತೆ? ಅಂದಮೇಲೆ ಭಾಗ್ಯ ವಿದಾತಾ ಭಗವಂತನು ತಮ್ಮ ಮಸ್ತಕದಲ್ಲಿ ಶ್ರೇಷ್ಠ ಭಾಗ್ಯದ ರೇಖೆಯನ್ನು ಎಳೆದಿದ್ದಾರೆ. ನಿಶ್ಚಿಂತ ಚಕ್ರವರ್ತಿಗಳು ಆಗಿದ್ದೀರಾ ಆ ಟೋಪಿ ಅಥವಾ ಖುರ್ಚಿಯಲ್ಲಿರುವ ಚಕ್ರವರ್ತಿಯಲ್ಲ. ನಿಶ್ಚಿಂತ ಚಕ್ರವರ್ತಿಗಳು.ಯಾವುದಾದರೂ ಚಿಂತೆಯಿದೆಯೇ? ಮಕ್ಕಳು-ಮೊಮ್ಮಕ್ಕಳ ಚಿಂತೆಯಿದೆಯೇ? ತಮ್ಮ ಕಲ್ಯಾಣವಾಗಿದೆಯೆಂದರೆ, ಅವರುಗಳ ಕಲ್ಯಾಣವೂ ಆಗುವುದು. ಹಾಗಾದರೆ ಸದಾ ತಮ್ಮ ಮಸ್ತಕದಲ್ಲಿರುವ ಶ್ರೇಷ್ಠ ಭಾಗ್ಯದ ರೇಖೆಯನ್ನು ನೋಡುತ್ತಿರಿ ವಾಹ್ ನನ್ನ ಶ್ರೇಷ್ಠ ಈಶ್ವರೀಯ ಭಾಗ್ಯವೇ! ಹಣ-ಆಸ್ತಿಯ ಭಾಗ್ಯವಲ್ಲ, ಈಶ್ವರೀಯ ಭಾಗ್ಯ. ಈ ಭಾಗ್ಯದ

ಮುಂದೆ ಆ ಹಣವೇನೂ ಬೆಲೆಯಿಲ್ಲ. ಅದಂತು ತಮ್ಮ ಹಿಂದಿಂದೆ ಬರುತ್ತದೆ. ಹೇಗೆ ನೆರಳು ತಮ್ಮ ಹಿಂದಿಂದೆ ಬರುತ್ತದೆಯೋ ಅಥವಾ ತಾವು ಹಿಂದೆ ಬಾ ಎಂದು ಹೇಳುತ್ತೀರಾ! ಅದೇರೀತಿ ಇದೆಲ್ಲವೂ ನೆರಳಿನಂತೆ ಆದರೆ ಇದು ಈಶ್ವರೀಯ ಭಾಗ್ಯವಾಗಿದೆ. ಸದಾ ಇದೇ ನಶೆಯಲ್ಲಿರಿ- ಒಂದುವೇಳೆ ಪಡೆಯಬೇಕೆಂದರೆ ಸದಾಕಾಲದ್ದನ್ನು ಪಡೆಯಬೇಕು. ಯಾವಾಗ ತಂದೆ ಮತ್ತು ಆತ್ಮನು ಅವಿನಾಶಿ ಅಂದಮೇಲೆ ಪ್ರಾಪ್ತಿಯೇಕೆ ವಿನಾಶಿ?ಪ್ರಾಪ್ತಿಯೂ ಅವಿನಾಶಿಯಾಗಿರುವುದೇ ಇರಬೇಕು. ಬ್ರಾಹ್ಮಣ ಜೀವನವಿರುವುದೇ ಖುಷಿಯಲ್ಲಿ, ಖುಷಿಯಿಂದ ತಿನ್ನುವುದು, ಖುಷಿಯಿಂದ ಇರುವುದು, ಖುಷಿಯಿಂದ ಮಾತನಾಡಿರಿ, ಖುಷಿಯಿಂದ ಕೆಲಸ ಮಾಡಿರಿ. ಏಳುತ್ತಿದ್ದಂತೆಯೇ ಕಣ್ಣು ತೆರೆಯಿತು ಮತ್ತು ಖುಷಿಯ ಅನುಭವವಾಯಿತು. ರಾತ್ರಿ ಕಣ್ಣು ಮುಚ್ಚಿತು, ಖುಷಿಯಿಂದ ವಿಶ್ರಾಂತಿಯಲ್ಲಿ ಹೋದಿರಿ- ಇದೇ ಬ್ರಾಹ್ಮಣ ಜೀವನವಾಗಿದೆ. ಒಳ್ಳೆಯದು!

**ಬಾಪ್‌ದಾದಾರೊಂದಿಗೆ ವ್ಯಕ್ತಿಗತ ವಾರ್ತಾಲಾಪ:**

(ಬಾಪ್‌ದಾದಾರವರ ಮುಂದೆ ಗಾಯತ್ರಿ ಮೋದಿಯ ಪರಿವಾರವು ಕುಳಿತುಕೊಂಡಿದ್ದಾರೆ). ಬಾಪ್‌ದಾದಾರವರಿಗೆ ಈ ಪರಿವಾರದಲ್ಲಿನ ಒಂದು ಮಾತನ್ನು ನೋಡಿ ಬಹಳ ಖುಷಿಯಿದೆ. ಅದು ಯಾವುದು? ಆಜ್ಞಾಕಾರಿ ಪರಿವಾರವಾಗಿದೆ. ಇಷ್ಟು ದೂರದಿಂದ ತಲುಪಿದ್ದೀರಲ್ಲವೆ! ಈ ಆಶೀರ್ವಾದಗಳೂ ಸಿಗುತ್ತದೆ.ಯಾರು ಆಜ್ಞೆಯನ್ನು ಪಾಲಿಸುತ್ತಾರೆಯೋ ಅವರಿಗೆ ಆಶೀರ್ವಾದಗಳು ಸಿಗುತ್ತವೆ. ಭಲೆ ಯಾರೊಬ್ಬರು ಹೇಳಿದರು. ಇನ್ನೊಬ್ಬರು ಒಪ್ಪಿದರೆಂದರೆ ಖುಷಿಯಾಗುತ್ತದೆ. ಹೃದಯದಿಂದ ಒಬ್ಬರಿನ್ನೊಬ್ಬರಪ್ರತಿ ಆಶೀರ್ವಾದಗಳು ಬರುತ್ತವೆ. ಯಾರೇ ಒಳ್ಳೆಯ ಮಿತ್ರ ಅಥವಾ ಸಹೋದರನಿದ್ದರೆ ಹೇಳುತ್ತಾರೆ- ಇವರು ಬಹಳ ಒಳ್ಳೆಯವರು ಎಂದು ಇದು ಆಶೀರ್ವಾದವಾಯಿತಲ್ಲವೆ! ಯಾರಿಗೇ 'ಹಾಂ ಜಿ' ಮಾಡುವುದು ಅಥವಾ ಆಜ್ಞೆಯನ್ನು ಪಾಲಿಸುವುದರಿಂದ ಗುಪ್ತ ಆಶೀರ್ವಾದವು ಸಿಗುತ್ತದೆ. ಆ ಆಶೀರ್ವಾದಗಳು ಸಮಯಕ್ಕೆ ಬಹಳ ಸಹಯೋಗ ಕೊಡುತ್ತದೆ. ಆ ಸಮಯದಲ್ಲಿ ಗೊತ್ತಾಗುವುದಿಲ್ಲ. ಆ ಸಮಯದಲ್ಲಂತು ಭಲೆ ಆಗಿಬಿಟ್ಟಿತೆಂದು ಸಾಧಾರಣ ಮಾತೆನಿಸುತ್ತದೆ. ಆದರೆ ಈ ಗುಪ್ತವಾದ ಆಶೀರ್ವಾದಗಳು ಆತ್ಮಗೆ ಸಮಯಕ್ಕೆ ಸಹಯೋಗ ಕೊಡುತ್ತದೆ. ಇದು ಜಮಾ ಆಗಿಬಿಡುತ್ತದೆ ಆದ್ದರಿಂದ ಬಾಪ್‌ದಾದಾರವರಿಗೆ ನೋಡಿ ಖುಷಿಯಾಗುತ್ತದೆ. ಭಲೆ ಯಾವುದೇ ಕಾರ್ಯಕ್ಕಾದರೂ ಬಂದಿರಬಹುದು, ಬಂದಿದ್ದೀರಲ್ಲವೆ ಮತ್ತು ಇದನ್ನೂ ನೆನಪಿಟ್ಟುಕೊಳ್ಳಿರಿ- ಪರಮಾತ್ಮನ ಸ್ಥಾನದಲ್ಲಿ ಯಾವುದೇ ಕಾರಣದಿಂದ, ಭಲೆ ನೋಡುವ ಕಾರಣದಿಂದ ಬಂದಿರಬಹುದು ಅಥವಾ ತಿಳಿದುಕೊಳ್ಳುವ ಕಾರಣದಿಂದ ಬಂದಿರಬಹುದು ಆದರೆ ಹೆಜ್ಜೆಯನ್ನು ಇಟ್ಟಿದೀರಿ. ಅದರ ಫಲವೂ ಜಮಾ ಆಗಿಬಿಡುತ್ತದೆ.ಇದೂ ಸಹ ಕಡಿಮೆ ಭಾಗ್ಯವಲ್ಲ. ಈ ಭಾಗ್ಯವೂ ಸಹ ಮುಂದೆ ನಡೆದಂತೆ ಅನುಭವ ಮಾಡುವಿರಿ. ಆ ಸಮಯದಲ್ಲಿ ತಮ್ಮನ್ನು ಬಹಳ ಭಾಗ್ಯಶಾಲಿ ಎಂದು ತಿಳಿಯುತ್ತೀರಿ. ಯಾವ ಕಾರಣದಿಂದ ನಾವು ಕಾಲನ್ನು ಇಟ್ಟಿದ್ದೇವೆ ಎನ್ನುವುದು ಈಗ ಗೊತ್ತಾಗುವುದಿಲ್ಲ ಗೊತ್ತಿಲ್ಲ ಇದೇನು ಎಂದು ಈಗ ಯೋಚಿಸುತ್ತೀರಿ ಆದರೆ ತಂದೆಗೆ ಗೊತ್ತಿದೆ-ತಿಳಿದೋ ತಿಳಿಯದೆಯೋ ಆ ಭಾಗ್ಯವು ಜಮಾ ಆಗಿಬಿಟ್ಟಿತು. ಅದು ಸಮಯದಲ್ಲಿ ತಮಗೂ ಗೊತ್ತಾಗುತ್ತದೆ ಮತ್ತು ಕೆಲಸಕ್ಕೆ ಉಪಯೋಗವಾಗುವುದು. ಒಳ್ಳೆಯದು! (ರಷ್ಯಾದ ಸಹೋದರ-ಸಹೋದರಿಯರ ನೆನಪುಗಳನ್ನು ಚಕ್ರಧಾರಿ ಅಕ್ಕನವರು ಕೊಟ್ಟರು)

ಒಳ್ಳೆಯದು, ಸ್ವಲ್ಪ ಸಮಯದಲ್ಲಿ ಬಹಳ ಒಳ್ಳೆಯ ಸಫಲತೆ ಆಗಿದೆ ಮತ್ತು ಒಳೊಳ್ಳೆಯ ಬಾಯಾರಿರುವ ಆತ್ಮರು ಬಂದಿದ್ದಾರೆ. ಅವರ ಸ್ನೇಹವು ತಂದೆಯ ಬಳಿ ತಲುಪಿಬಿಟ್ಟಿದೆ. ಎಲ್ಲರಿಗೂ ನೆನಪು-ಪ್ರೀತಿಯನ್ನು ಬರೆಯಿರಿ ಮತ್ತು ಹೇಳಿರಿ ಬಾಪ್‌ದಾದಾರವರ ಸ್ನೇಹವು ಎಲ್ಲಾ ಮಕ್ಕಳಿಗೂ ಸಹಯೋಗವನ್ನು ಕೊಡುತ್ತಾ ಮುಂದುವರೆಸುತ್ತಿದೆ. ಒಳ್ಳೆಯ ಸೇವೆಯಾಗಿದೆ. ವೃದ್ಧಿ ಮಾಡುತ್ತಾ ಸಾಗಿರಿ.

ಅವ್ಯಕ್ತ ಮುರಳಿ/ ರಿವೈಸ್ ಕೋರ್ಸ್ 02-01-1990.

**ಇಡೀ ಜ್ಞಾನದ ಸಾರ - ಸ್ಮೃತಿ.**

ಇಡೀ ಡ್ರಾಮಾ ಸ್ಮೃತಿ ಮತ್ತು ವಿಸ್ಮೃತಿಯ ಆಟ. "ತಾವು ಆತ್ಮರು, ಶರೀರವಲ್ಲ" ಎಂಬ ಸ್ಮೃತಿಯನ್ನು ತರಿಸುವುದರಿಂದ ಬಾಪ್‌ದಾದಾ ನಮ್ಮನ್ನು ಪರಿವರ್ತನೆ ಮಾಡಿದರು. ಸ್ಮೃತಿ ಎಂಬುದು ಬೀಜ, ಬೀಜದಿಂದ ವೃತ್ತಿ, ದೃಷ್ಟಿ, ಕೃತಿ, ಇಡೀ ಸ್ಥಿತಿಯೇ ಬದಲಾಗುತ್ತದೆ. ನಮ್ಮೆಲ್ಲರಿಗೂ ಬರುವ ಎಂತಹ ಪರಿಸ್ಥಿತಿ, ಪರೀಕ್ಷೆ, ವಿಘ್ನವಾದರೂ, ಸಮಸ್ಯೆಯಾದರು ಅವುಗಳನ್ನು ಮಾರ್ಗದ ಬದಿಯ ದೃಶ್ಯಗಳಂತೆ (ನಥಿಂಗ್ ನ್ಯೂ) ಹೊಸದೇನಲ್ಲ, ಅನೇಕ ಬಾರಿ ಈ ದೃಶ್ಯಗಳನ್ನು ದಾಟಿದ್ದೇವೆ ಎಂಬ ಸ್ಮೃತಿ ಇರುವುದರಿಂದ ಸಮರ್ಥವಾಗಿ ಅಂತಹ ಪರಿಸ್ಥಿತಿಗಳನ್ನು ದಾಟಬಲ್ಲಿರಿ. ಮತ್ತು ಸ್ಮೃತಿಯಿಂದಲೇ ಎಲ್ಲಾ ಸಬ್ಜೆಕ್ಟ್ ಗಳು ಅರ್ಥಾಥ್ ಸ್ಮೃತಿ, ಜ್ಞಾನ, ದಿವ್ಯಗುಣಗಳು ಮತ್ತು ಸೇವೆಯಲ್ಲಿ ಪಾಸ್ ಆಗುತ್ತೀರಿ. ನಾನು ಯಾರು? ಬಾಬಾ ಯಾರು? ಎಂದು ನೆನಪಿಡುವುದರಿಂದಲೇಸ್ಮೃತಿ ಎಂಬ ಸಬ್ಜೆಕ್ಟ್ ನಲ್ಲಿ ಪಾಸ್ ಆಗಬಹುದು. ರಚನೆ ಮತ್ತು ರಚಯಿತರ ಜ್ಞಾನವನ್ನು ಅನಾದಿ ಆದಿಯಲ್ಲಿ ನಾನು ಯಾರು? ಮತ್ತು ವರ್ತಮಾನ ಸಮಯದಲ್ಲಿ ನಾನು ಯಾರು? ಎಂದರೆ ಬ್ರಾಹ್ಮಣರಿಂದ ಫರಿಶ್ತಾ, ಫರಿಶ್ತಾನಿಂದ ದೇವತೆ ಎಂಬ ಸ್ಮೃತಿಯಿಂದ ಜ್ಞಾನದ ಸಬ್ಜೆಕ್ಟ್ ನಲ್ಲಿ ಪಾಸ್ ಆಗುತ್ತೀರಿ. ಯಾವ ಸಮಯಕ್ಕೆ ಯಾವ ಗುಣವನ್ನು ಕಾರ್ಯದಲ್ಲಿ ಉಪಯೋಗಿಸಬೇಕು ಎಂಬ ಸ್ಮೃತಿ ಇದ್ದಾಗ ದಿವ್ಯ ಗುಣವನ್ನು ಬಳಸಿ ದಿವ್ಯ ಗುಣಗಳು ಎಂಬ ಮೂರನೇ ಸಬ್ಜೆಕ್ಟ್ ನಲ್ಲಿ ಪಾಸ್ ಆಗುತ್ತೀರಿ. ನಿಮ್ಮ ಚಹರೆಯಿಂದಲೇ ಇತರರನ್ನು ಕೂಡ ಸ್ಮೃತಿ ಸ್ವರೂಪ ಅರ್ಥಾತ್ ನಾನು ಆತ್ಮ ಎಂಬ ಸ್ಮೃತಿಯನ್ನು ಕೊಡಬೇಕು. ಮತ್ತು ನೀವು ಮಾಡಿರುವ ಪ್ರತಿಯೊಂದು ತ್ಯಾಗಕ್ಕೆ ಪದಮಾ ಪದಂ ಪಟ್ಟು ಪ್ರಾಪ್ತಿ ಲಭಿಸುತ್ತದೆ. ಎಂದು ಹೇಳುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ಮೃತಿ ಸ್ವರೂಪ, ಸಮರ್ಥ ಸ್ವರೂಪ.

2. ನಾನು ಸ್ಮೃತಿ ಎಂಬ ಬೀಜದಿಂದ ನನ್ನ ವೃತ್ತಿ, ದೃಷ್ಟಿ, ಕೃತಿಯಲ್ಲಿ ಅಲೌಕಿಕ ಪರಿವರ್ತನೆಯನ್ನು ಮಾಡಿಕೊಂಡು, ಸ್ಥಿತಿಯನ್ನು ಗಾಯನಾ ಯೋಗ್ಯವಾಗಿ ತಯಾರು ಮಾಡಿಕೊಂಡಿದ್ದೇನೆ.

3. ನಾನು ಶರೀರವಲ್ಲ, ಆತ್ಮ ಎಂಬ ಈ ಸ್ಮೃತಿಯಿಂದ ಮಾಸ್ಟರ್ ಸರ್ವಶಕ್ತಿವಾನ್ ಸ್ವರೂಪವಾಗಿ, ಸಮರ್ಥ ಸ್ವರೂಪವಾಗಿ ಎಲ್ಲರಿಗೂ ಇದೇ ಸ್ಮೃತಿಯನ್ನು ಕೊಡಿಸಿ, ಈಶ್ವರೀಯ ಪ್ರಪಂಚವನ್ನು ತಯಾರು ಮಾಡಿದ್ದೇನೆ.

4. ಪ್ರತಿಯೊಂದು ಪರಿಸ್ಥಿತಿ, ಪರೀಕ್ಷೆ, ವಿಘ್ನ, ಸಮಸ್ಯೆ, ಯಾವುದನ್ನಾದರೂ ಒಂದು ಆಟದಂತೆ, ಮಾರ್ಗ ಬದಿಯ ದೃಶ್ಯದಂತೆ ಭಾವಿಸಿ, ತಳಪಾಯವನ್ನು ಗಟ್ಟಿಯಾಗಿ ಹಾಕಿಕೊಂಡಿರುವ ಅಚಲ ಸ್ವರೂಪ.

5. ನಾನು ಯಾರು? (ಆತ್ಮ) ಬಾಬಾ ಯಾರು? (ಪರಮಾತ್ಮ), ಎಂದು ಗುರುತಿಸಿ ಸ್ಮೃತಿ ಎಂಬ ಮೊದಲ ಮುಖ್ಯ ಸಬ್ಜೆಕ್ಟ್ ನಲ್ಲಿ ಪಾಸಾಗಿದ್ದೇನೆ.

6. ನಾನು ರಚನೆ ಮತ್ತು ರಚಯಿತನ ಜ್ಞಾನ, ಅನಾದಿ, ಆದಿ, ವರ್ತಮಾನ ಸಮಯದ ಜ್ಞಾನ ಅರ್ಥಾತ್ ಬ್ರಾಹ್ಮಣರಿಂದ ಫರಿಶ್ತಾ, ಫರಿಶ್ತಾನಿಂದ ದೇವತೆ ಎಂಬ ಸ್ಮೃತಿಯಿಂದ ಜ್ಞಾನವೆಂಬ ಎರಡನೆಯ ಸಬ್ಜೆಕ್ಟ್ ನಲ್ಲಿ ಪಾಸ್ ಆಗಿದ್ದೇನೆ.

7. ನಾನು ಸಮಯ ಪ್ರಮಾಣ ದಿವ್ಯ ಗುಣಗಳನ್ನು, ಸ್ಮೃತಿಯಿಂದ ಕರ್ಮದಲ್ಲಿ ತರುವ ಅಭ್ಯಾಸದಿಂದ ನಿರಂತರ ಮತ್ತು ಸ್ವತಹವಾಗಿ ದಿವ್ಯ ಗುಣಗಳನ್ನು ಸಹಜವಾಗಿ ಪ್ರತಿಯೊಂದು ಕರ್ಮದಲ್ಲಿ ಅಥವಾ ಕಾರ್ಯದಲ್ಲಿ ಉಪಯೋಗಿಸಿ ದಿವ್ಯಗುಣಗಳು ಎಂಬ ಮೂರನೇ ಸಬ್ಜೆಕ್ಟ್ ನಲ್ಲಿ ಪಾಸ್ ಆಗಿದ್ದೇನೆ.

8. ನಾನು ವಿಶ್ವಕಲ್ಯಾಣಕಾರಿ, ನಿಮಿತ್ತಾತ್ಮ ಎಂಬ ಸ್ಮೃತಿಯಿಂದ ಎಲ್ಲರಿಗೂ ಸ್ವಯಂನ ಮತ್ತು ತಂದೆಯ ಸ್ಮೃತಿಯನ್ನು ಕೊಡಿಸಿ ಸೇವೆಯಲ್ಲಿ ಸಫಲತೆಯನ್ನು ಪಡೆದು ಸೇವೆ ಎಂಬ ನಾಲ್ಕನೆಯ ಸಬ್ಜೆಕ್ಟ್ ನಲ್ಲಿ ಪಾಸ್ ಆಗಿದ್ದೇನೆ.

9. ನಾನು ಸ್ಮೃತಿ, ಜ್ಞಾನ, ದಿವ್ಯಗುಣಗಳು, ಸೇವೆ ಈ ನಾಲ್ಕು ಸಬ್ಜೆಕ್ಟ್ ನಲ್ಲಿ ಪಾಸಾಗಿ ನಷ್ಟೋಮೋಹ ಸ್ಮೃತಿ ಸ್ವರೂಪ ಎಂಬ ಅಂತಿಮ ಪರೀಕ್ಷೆಯಲ್ಲಿ ಮೊದಲ ನಂಬರ್ ನಲ್ಲಿ ಉತ್ತೀರ್ಣವಾಗಿದ್ದೇನೆ.

10. ನಾನು ನನ್ನ ಸ್ಮೃತಿ ಸ್ವರೂಪ ಚಹರೆಯಿಂದ ಎಲ್ಲರನ್ನೂ "ನಾನು ಆತ್ಮ" ಎಂಬ ಸ್ಮೃತಿ ಸ್ವರೂಪವಾಗಿ ತಯಾರು ಮಾಡಿದ್ದೇನೆ.

11. ನಾನು ವಿಸ್ಮೃತಿಯಲ್ಲಿ ಇರುವವರಿಗೆ ಸ್ಮೃತಿ ಕೊಡಿಸಿ ಸೇವೆ ಮಾಡಿರುವ ಸ್ವತಹ ಮತ್ತು ನಿರಂತರ ಸ್ಮೃತಿ ಸ್ವರೂಪ.

12. ನಾನು ಸೇವೆಗೆ ಸಮರ್ಪಣೆಯಾಗುವ ಧೈರ್ಯ(ಸಾಹಸ)ದಿಂದ ಸಮರ್ಥವಾಗಿ ಈ ತ್ಯಾಗಕ್ಕೆ ಪದಮಾ ಪದಂ ಪಟ್ಟು ಪ್ರಾಪ್ತಿಯನ್ನು ಪಡೆದಿದ್ದೇನೆ.

13. ನಾನು ನಿಶ್ಚಿತ ಚಕ್ರವರ್ತಿ ಲೈಟ್ ಹೌಸ್, ಮೈಟ್ ಹೌಸ್ ಆಗಿ ಶುಭ ಭಾವನೆ ಶುಭಕಾಮನೆಯ ತರಂಗಗಳನ್ನು ವಿಶ್ವವೆಲ್ಲಾ ವ್ಯಾಪಿಸಿದ್ದೇನೆ.